ಸ್ಥಾಪನೆ : 1938

ದೂರವಾಣಿ : 080–22860125
29580125

# ನ್ಯಾಯಾಂಗ ಇಲಾಖೆ ವಿವಿಧೋದ್ದೇಶ ಸಹಕಾರ ಸಂಘ ನಿಯಮಿತ

**ನೋಂದಣಿ ಸಂಖ್ಯೆ : 437–ಎ.ಆರ್.ದಿನಾಂಕ : 14.10.1938**

**ಮೊದಲನೇ ಮಹಡಿ, ಹಳೆಯ ಕೆ.ಜಿ.ಐ.ಡಿ ಕಟ್ಟಡ, ಉಚ್ಚ ನ್ಯಾಯಾಲಯ ಆವರಣ, ಬೆಂಗಳೂರು–560 001.**

**e-mail Id : jdmpcsl@gmail.com Website : www.jdmcs.in**

## 2022–2023ನೇ ಸಾಲಿನ 73ನೇ ಸರ್ವಸದಸ್ಯರ ಮಹಾಸಭೆಯ ಸೂಚನಾ ಪತ್ರ

ನ್ಯಾಯಾಂಗ ಇಲಾಖೆ ವಿವಿಧೋದ್ದೇಶ ಸಹಕಾರ ಸಂಘ ನಿಯಮಿತ ಈ ಸಂಘದ 2022–2023ನೇ ಸಾಲಿನ 73ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆಯನ್ನು **ದಿನಾಂಕ 10–09–2023ನೇ ಭಾನುವಾರದಂದು ಬೆಳಿಗ್ಗೆ 10:00 ಘಂಟೆಗೆ ಸರಿಯಾಗಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಸಭಾಂಗಣ (NGO's Hall), ಎಂ.ಎಸ್. ಬಿಲ್ಡಿಂಗ್ ಎದುರು, ವಿಧಾನಸೌಧ ಮೆಟ್ರೋ ಸ್ಟೇಷನ್ ಹತ್ತಿರ, ಕಬ್ಬನ್ ಪಾರ್ಕ್, ಬೆಂಗಳೂರು–560 001** ಇಲ್ಲಿ ಸಂಘದ ಅಧ್ಯಕ್ಷರಾದ **ಶ್ರೀ ಪ್ರಕಾಶ್ ಟಿ. ರವರ ಅಧ್ಯಕ್ಷತೆಯಲ್ಲಿ** ನಡೆಸಲು ತೀರ್ಮಾನಿಸಲಾಗಿದೆ. ಆದ್ದರಿಂದ ಮಾನ್ಯ ಸದಸ್ಯರು ಸಕಾಲಕ್ಕೆ ಆಗಮಿಸಿ 73ನೇ ಸರ್ವಸದಸ್ಯರ ಮಹಾಸಭೆಯನ್ನು ಯಶಸ್ವಿಯಾಗಿ ನಡೆಸಿಕೊಡಬೇಕೆಂದು ಅತ್ಯಂತ ಕಳಕಳಿಯಿಂದ ವಿನಂತಿಸಲಾಗಿದೆ.

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ

**ದಿನಾಂಕ : 11/08/2023**

ಸಹಿ/–

ಸ್ಥಳ : ಬೆಂಗಳೂರು

**(ಕಾಂತರಾಜ್ ಎಸ್. ಎನ್.)**

ವ್ಯವಸ್ಥಾಪಕರು / ವೇತನಕಾರ್ಯದರ್ಶಿ

## 2022–23ನೇ ಸಾಲಿನ 73ನೇ ಸರ್ವಸದಸ್ಯರ ಮಹಾಸಭೆಯ ಕಾರ್ಯಕ್ರಮಗಳು

1. ಪ್ರಾರ್ಥನೆ
2. ನಾಡಗೀತೆ
3. ಸ್ವಾಗತ ಭಾಷಣ
4. 2022–2023ನೇ ಸಾಲಿನ ಸರ್ವಸದಸ್ಯರುಗಳ ವಾರ್ಷಿಕ ಮಹಾಸಭೆಯ ನೋಟೀಸನ್ನು ಓದಿ ದಾಖಲು ಮಾಡುವುದು.
5. ದೈವಾಧೀನರಾದ ಸಂಘದ ಸದಸ್ಯರುಗಳಿಗೆ ಗೌರವಾರ್ಥವಾಗಿ ಸಂತಾಪ ಸೂಚನೆ.
6. ಆಡಳಿತ ಮಂಡಳಿಯ ವಾರ್ಷಿಕ ವರದಿಯನ್ನು ಪರಿಶೀಲಿಸಿ ಅನುಮೋದನೆ ಪಡೆದುಕೊಳ್ಳುವುದು.
7. 2022–2023ನೇ ಸಾಲಿನ ನಿವ್ವಳ ಲಾಭ ವಿತರಿಸಲು ಅನುಮೋದನೆ ಪಡೆದುಕೊಳ್ಳುವುದು.
8. 2022–2023ನೇ ಸಾಲಿನ ಎಸ್.ಎಸ್.ಎಲ್.ಸಿ. ಹಾಗೂ ದ್ವಿತೀಯ ಪಿ.ಯು.ಸಿ.ಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾಪುರಸ್ಕಾರ [ಪ್ರಶಸ್ತಿಪತ್ರ ಮತ್ತು ನಗದು ವಿತರಣೆ]
9. ಹಿಂದಿನ ಮಹಾಸಭೆಯ ಕಾರ್ಯಕಲಾಪಗಳನ್ನು ಓದಿ ದಾಖಲು ಮಾಡುವುದು.
10. 2023–2024ನೇ ಸಾಲಿನ ಅಂದಾಜು ವೆಚ್ಚದ ಅನುಮೋದನೆ.
11. 2022–2023ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಅಂಗೀಕರಿಸುವುದು.
12. 2023–2024ನೇ ಅವಧಿಗಾಗಿ ಸನ್ನದು ಲೆಕ್ಕಪರಿಶೋಧಕರನ್ನು ನೇಮಿಸಲು ಅನುಮೋದನೆ ಪಡೆದುಕೊಳ್ಳುವುದು.
12. ಬೈಲಾ ತಿದ್ದುಪಡಿ
13. ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು.
14. ವಂದನಾರ್ಪಣೆ.
15. ರಾಷ್ಟ್ರಗೀತೆ.

# ನ್ಯಾಯಾಂಗ ಇಲಾಖೆ ವಿವಿಧೋದ್ದೇಶ ಸಹಕಾರ ಸಂಘ ನಿಯಮಿತ

ಮೊದಲನೇ ಮಹಡಿ, ಹಳೆಯ ಕೆ.ಜಿ.ಐ.ಡಿ ಕಟ್ಟಡ, ಉಚ್ಚ ನ್ಯಾಯಾಲಯ ಆವರಣ, ಬೆಂಗಳೂರು–560 001.

## ಆಡಳಿತ ಮಂಡಳಿಯ ಸದಸ್ಯರುಗಳು

| ಕ್ರಮ ಸಂಖ್ಯೆ | ನಿರ್ದೇಶಕರ ಹೆಸರು | ಹುದ್ದೆ |
|---|---|---|
| 1. | ಶ್ರೀ ಪ್ರಕಾಶ್ ಟಿ | ಅಧ್ಯಕ್ಷರು |
| 2. | ಶ್ರೀ ಚಂದ್ರಶೇಖರ್. ಜಿ | ಉಪಾಧ್ಯಕ್ಷರು |
| 3. | ಶ್ರೀ ಭೀಮಣ್ಣ ಹೆಚ್.ಎಸ್ | ಖಜಾಂಚಿ |
| 4. | ಶ್ರೀ ವೆಂಕಟಾಚಲಪತಿ ನಾಯಕ್.ಎಸ್ | ಆಂತರಿಕ ಲೆಕ್ಕಪರಿಶೋಧಕರು |
| 5. | ಶ್ರೀ ಅಣ್ಣೇಗೌಡ. ಕೆ.ಸಿ | ನಿರ್ದೇಶಕರು |
| 6. | ಶ್ರೀ ಮೋಹನ್ ಕುಮಾರ್.ಎಂ.ಎನ್ | ನಿರ್ದೇಶಕರು |
| 7. | ಶ್ರೀ ಕೃಷ್ಣಪ್ಪ. ಎಂ.ಸಿ. | ನಿರ್ದೇಶಕರು |
| 8. | ಶ್ರೀ ಪ್ರಸನ್ನ ಎಂ.ಕೆ | ನಿರ್ದೇಶಕರು |
| 9. | ಶ್ರೀ ಪ್ರಕಾಶ್. ಹೆಚ್ | ನಿರ್ದೇಶಕರು |
| 10. | ಶ್ರೀ ಪೂರ್ಣೇಶ್ ಡಿ.ಜಿ. | ನಿರ್ದೇಶಕರು |
| 11. | ಶ್ರೀ ಮಹದೇವಯ್ಯ ಕೆ. | ನಿರ್ದೇಶಕರು |
| 12. | ಶ್ರೀಮತಿ ತನುಜಾರಾಣಿ.ಪಿ.ಆರ್. | ನಿರ್ದೇಶಕರು |
| 13. | ಶ್ರೀಮತಿ ಪ್ರೇಮಕುಮಾರಿ. ಎಂ | ನಿರ್ದೇಶಕರು |
| 14. | ಶ್ರೀ ಪರಶುರಾಮ ಕೆ ದೊಡಮನಿ | ನಿರ್ದೇಶಕರು |
| 15. | ಶ್ರೀ ಮುರಳೀಧರ. ಕೆ | ನಿರ್ದೇಶಕರು |
| 16. | ಶ್ರೀ ರಾಘವೇಂದ್ರ ಬಿ.ಎಸ್ | ನಿರ್ದೇಶಕರು |
| 17. | ಶ್ರೀಮತಿ ಸರೋಜ ಸಿ.ಎಂ | ನಿರ್ದೇಶಕರು |

## –: ಸೂಚನೆಗಳು :–

1 ಮಾನ್ಯ ಸದಸ್ಯರು ಮಹಾಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳು ಇದ್ದಲ್ಲಿ ಮಹಾಸಭೆ ನಡೆಯುವ 05 ದಿನಗಳ ಮುಂಚಿತವಾಗಿ ಸಂಘಕ್ಕೆ ಲಿಖಿತ ರೂಪದಲ್ಲಿ ತಲುಪಿಸತಕ್ಕದ್ದು. ತದನಂತರ ಬಂದ ವಿಷಯಗಳನ್ನು ಮಹಾಸಭೆಯಲ್ಲಿ ಚರ್ಚಿಸಲು ಅವಕಾಶವಿರುವುದಿಲ್ಲ.

2 ಸಂಘದ ಸದಸ್ಯರ ಮನೆಯ ವಿಳಾಸ, ಮೊಬೈಲ್ (ದೂರವಾಣಿ ಸಂಖ್ಯೆ) ಬದಲಾದಲ್ಲಿ ಅಥವಾ ಬೇರೆ ನ್ಯಾಯಾಲಯಗಳಿಗೆ ವರ್ಗಾವಣೆಗೊಂಡಲ್ಲಿ ಮಾಹಿತಿಯನ್ನು ಖುದ್ದಾಗಿ, ಲಿಖಿತ ರೂಪದಲ್ಲಿ, ದೂರವಾಣಿ ಮೂಲಕವಾಗಿ ಅಥವಾ ಇ–ಮೇಲ್ ಮುಖಾಂತರವಾಗಿ ಸಂಘದ ಕಛೇರಿಗೆ ತಿಳಿಸತಕ್ಕದ್ದು.

3 ಮಹಾಸಭೆಗೆ ಸಂಘವು ನೀಡಿರುವ ಭಾವಚಿತ್ರವಿರುವ ಗುರುತಿನ ಚೀಟಿಯು ಕಡ್ಡಾಯವಾಗಿರುವುದರಿಂದ ಗುರುತಿನ ಚೀಟಿಯನ್ನು ಪಡೆಯದ ಸಂಘದ ಮಾನ್ಯ ಸದಸ್ಯರು ಸಂಘದ ಕಛೇರಿಯ ವೇಳೆಯಲ್ಲಿ ಬಂದು ಪಡೆದುಕೊಳ್ಳತಕ್ಕದ್ದು.

4 ಸಂಘದ ಮಹಾಸಭೆಗೆ ಹಾಜರಾಗುವ ಮಾನ್ಯ ಸದಸ್ಯರುಗಳಿಗೆ ಸಾರಿಗೆ ಭತ್ಯೆಯಾಗಿ ರೂ. 200/– ಹಾಗೂ ಊಟದ ಭತ್ಯೆ ರೂ.200/– ಗಳನ್ನು ಸೇರಿಸಿ ಒಟ್ಟು ರೂ. 400/– ಗಳನ್ನು ಮಹಾಸಭೆಗೆ ಹಾಜರಾದ ಸದಸ್ಯರಿಗೆ ಮಾತ್ರ ವಿತರಿಸಲಾಗುವುದು.

5 ಮಹಾಸಭೆಗೆ ಹಾಜರಾಗುವ ಸದಸ್ಯರುಗಳಿಗೆ ಬೆಳಿಗ್ಗೆ 10–30ರವರೆಗೆ ಲಘು ಉಪಹಾರವನ್ನು ವಿತರಿಸುವ ವ್ಯವಸ್ಥೆಯನ್ನು ಮಾಡಲಾಗಿದೆ.

6 ಸದಸ್ಯರಿಗೆ ಸಂಘವು ಗಳಿಸಿದ ನಿವ್ವಳ ಲಾಭದಲ್ಲಿ ಡಿವಿಡೆಂಡ್ ಹಣವನ್ನು ಮಹಾಸಭೆಯ ಒಪ್ಪಿಗೆ ಪಡೆದು ವಿತರಿಸಲಾಗುವುದು. ಸದಸ್ಯರು ಡಿವಿಡೆಂಡ್ ಹಣವನ್ನು ಪಡೆದುಕೊಳ್ಳಲು ಗುರುತಿನ ಚೀಟಿಯನ್ನು ಖಡ್ಡಾಯವಾಗಿ ಹಾಜರುಪಡಿಸಬೇಕು.

7 2022–23 ನೇ ಶೈಕ್ಷಣಿಕ ವರ್ಷದ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಶೇಕಡಾ 95% ಮತ್ತು ಅದಕ್ಕೂ ಹೆಚ್ಚು ಹಾಗೂ ದ್ವಿತೀಯ ಪಿ.ಯು.ಸಿ ಪರೀಕ್ಷೆಯಲ್ಲಿ ಶೇಕಡಾ 90% ಮತ್ತು ಅದಕ್ಕೂ ಹೆಚ್ಚಿನ ಅಂಕಗಳನ್ನು ಗಳಿಸಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ ಸಂಘದ ಸದಸ್ಯರುಗಳ ಮಕ್ಕಳ ಹೆಸರು, ಭಾವಚಿತ್ರ ಮತ್ತು ವಿವರಗಳನ್ನು ಪ್ರತಿಭಾ ಪುರಸ್ಕಾರ ಪಟ್ಟಿಗೆ ಸೇರಿಸಲು ಆಯಾ ಶೈಕ್ಷಣಿಕ ವರ್ಷದೊಳಗೆ ಅರ್ಜಿಗಳನ್ನು ಸಲ್ಲಿಸಿಕತ್ಕದ್ದು. ಪ್ರತಿ ವರ್ಷ ನಿಗದಿಪಡಿಸಲಾಗುವ ಶೇಕಡವಾರು ಅಂಕಗಳನ್ನು ಸುತ್ತೋಲೆಯ ಮೂಲಕ ತಿಳಿಸಲಾಗುವುದು. ಸುತ್ತೋಲೆ ತಲುಪದಿದ್ದ ಪಕ್ಷದಲ್ಲಿ ಸದಸ್ಯರು ದೂರವಾಣಿ ಮೂಲಕ ಸಂಘದ ಕಛೇರಿಯನ್ನು ಸಂಪರ್ಕಿಸಿ ವಿವರಗಳನ್ನು ಪಡೆಯುವುದು.

8 ಸಹಕಾರ ಸಂಘಗಳ ಕಾಯ್ದೆ 20(2) **(a-iv), (a-v)** & **27-'A'** ಪ್ರಕಾರ ಕಳೆದ 5 (ಐದು) ಮಹಾಸಭೆಗಳಲ್ಲಿ ಕನಿಷ್ಠ 2 (ಎರಡು) ಮಹಾಸಭೆಗಳಿಗೆ ಹಾಜರಾಗದ ಸದಸ್ಯರಿಗೆ ಹಾಗೂ ಕಳೆದ ಐದು ವರ್ಷಗಳ ಪೈಕಿ 2 (ಎರಡು) ವರ್ಷಗಳಲ್ಲಿ ಕನಿಷ್ಠ ಸೇವೆ ಬಳಸಿಕೊಳ್ಳದ ಸದಸ್ಯರಿಗೆ ಮುಂದಿನ ಚುನಾವಣೆಯಲ್ಲಿ ಮತ ಚಲಾಯಿಸಲು ಹಾಗೂ ನಿರ್ದೇಶಕರ ಸ್ಥಾನಗಳಿಗೆ ಸ್ಪರ್ಧಿಸಲು ಹಕ್ಕಿರುವುದಿಲ್ಲ.

9 ಲೆಕ್ಕಪರಿಶೋಧನಾ ವರದಿ ಹಾಗೂ ಆರ್ಥಿಕ ತಃಖ್ತೆಯನ್ನು ಮಾನ್ಯ ಸದಸ್ಯರು ಸಂಘದ ವೆಬ್ ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಂಡು ಪರಿಶೀಲಿಸಬಹುದಾಗಿದೆ. ಮಾನ್ಯ ಸದಸ್ಯರು ತಮ್ಮ ಸಾಲದ ಖಾತೆಗಳು, ಭವಿಷ್ಯನಿಧಿ (PF) ಹಾಗೂ ಉಳಿತಾಯ ಠೇವಣಿ (SD) ಖಾತೆಗಳ ವಿವರಗಳನ್ನು ತಿಳಿದುಕೊಳ್ಳಲು ಸಂಘದ ಅಧಿಕೃತ ಜಾಲತಾಣವನ್ನು ಬಳಸಿಕೊಳ್ಳಲು ಕೋರಲಾಗಿದೆ.

1) ವೆಬ್ ಸೈಟ್ ವಿಳಾಸ – www.jdmcs.in

2) **Login ID** – ಸಂಘದ ಸದಸ್ಯತ್ವ ಸಂಖ್ಯೆಯನ್ನು ನಮೂದಿಸುವುದು

3) **Pass word** – ಜನ್ಮ ದಿನಾಂಕವನ್ನು ನಮೂದಿಸುವುದು

(ಉದಾಹರಣೆ :– ತಮ್ಮ ಜನ್ಮ ದಿನಾಂಕ 2–6–1972 ಆಗಿದ್ದರೆ **Password 02–06–1972** ಆಗಿರುತ್ತದೆ)

10 ಮಾನ್ಯ ಸಂಘದ ಸದಸ್ಯರು ಮಾಸಿಕ ಕಂತಿನ ಹಣವನ್ನು HRMS ಮೂಲಕ ತಮ್ಮ ತಮ್ಮ ಕಛೇರಿಯಿಂದಲೇ ಕಡ್ಡಾಯವಾಗಿ ಕಡಿತ ಮಾಡಿ ಕಳುಹಿಸುವುದು. ತಪ್ಪಿದಲ್ಲಿ ಅಂತಹ ಸದಸ್ಯರುಗಳು ಸಾಲ (LOAN) ಪಡೆಯಲು ಅರ್ಹರಾಗಿರುವುದಿಲ್ಲ. ಸದಸ್ಯರು ಸಾಲಕ್ಕೆ ಅರ್ಜಿ ಸಲ್ಲಿಸುವಾಗ ತಮ್ಮ ಬ್ಯಾಂಕಿನ ಖಾತೆ ಸಂಖ್ಯೆ, ಬ್ಯಾಂಕಿನ ಶಾಖೆ ಹಾಗೂ ಬ್ಯಾಂಕಿನ ಐಎಫ್ಎಸ್‌ಸಿ ಕೋಡ್ ಅನ್ನು ಕಡ್ಡಾಯವಾಗಿ ಅರ್ಜಿಯಲ್ಲಿ ನಮೂದಿಸಬೇಕೆಂದು ತಿಳಿಸಲಾಗಿದೆ.

11 ಸದಸ್ಯರ ಖಾತೆಗಳಿಗೆ ಸಂಬಂಧಪಟ್ಟ ವಹಿವಾಟುಗಳ ವಿವರಗಳನ್ನು ಮೊಬೈಲ್ ಸಂಖ್ಯೆಗಳಿಗೆ ಎಸ್.ಎಂ.ಎಸ್ ಮೂಲಕ ತಿಳಿಸುವ ವ್ಯವಸ್ಥೆ ಮಾಡಲಾಗಿದೆ. ಎಸ್.ಎಂ.ಎಸ್ ಸಂದೇಶಗಳು ತಲುಪದ ಸದಸ್ಯರು ಸಂಘದ ಕಛೇರಿಯನ್ನು ಸಂಪರ್ಕಿಸಿ ತಮ್ಮ ಮೊಬೈಲ್ ಸಂಖ್ಯೆಗಳನ್ನು ಅಪಡೇಟ್ ಮಾಡಿಸಿಕೊಳ್ಳಲು ಕೋರಲಾಗಿದೆ.

12 ಸರ್ವಸದಸ್ಯರ ಮಹಾಸಭೆಯ ವಿಳಾಸಕ್ಕೆ ಬರಲು ಈ ಕೆಳಗಿನ QR ಕೋಡನ್ನು ಸ್ಕ್ಯಾನ್ ಮಾಡಿ ಗೂಗಲ್ ಮ್ಯಾಪ್ ತಂತ್ರಾಂಶದ ಮೂಲಕ ಸಭಾಂಗಣದ ವಿಳಾಸ ತಿಳಿದುಕೊಳ್ಳಬಹುದು.

**Scan for Location**

# ನ್ಯಾಯಾಂಗ ಇಲಾಖೆ ವಿವಿಧೋದ್ದೇಶ ಸಹಕಾರ ಸಂಘ ನಿಯಮಿತ

ಬೆಂಗಳೂರು – 560 001

| ಸಂಖ್ಯೆ | ಬೈಲಾ ಸಂಖ್ಯೆ | ಹಾಲಿ ಬೈಲಾ | ಬೈಲಾ ಸಂಖ್ಯೆ | ಪ್ರಸ್ತಾಪಿಸಿದ ತಿದ್ದುಪಡಿಗಳು (ನಂತರ ಈ ರೀತಿ ಓದಿಕೊಳ್ಳುವುದು) | ತಿದ್ದುಪಡಿಗೆ ಕಾರಣಗಳು |
|---|---|---|---|---|---|
| 1 | ೩೮ಎ | ಸ್ಥಿರಾಸ್ಥಿಗಳ ಮೇಲಿನ ಸಾಲ ಹೊರತುಪಡಿಸಿ ಯಾವುದೇ ಸಂದರ್ಭದಲ್ಲಿ ಯಾವುದೇ ಸದಸ್ಯರು ಸಂಘದಿಂದ ಪಡೆದಿರುವ ಸಾಲದ ಋಣವು ರೂ. 2,80,000/- ಗಳನ್ನು ಮೀರತಕ್ಕದ್ದಲ್ಲ. | ೩೮ಎ | ಸ್ಥಿರಾಸ್ಥಿಗಳ ಮೇಲಿನ ಸಾಲ ಹೊರತುಪಡಿಸಿ ಯಾವುದೇ ಸಂದರ್ಭದಲ್ಲಿ ಯಾವುದೇ ಸದಸ್ಯರು ಸಂಘದಿಂದ ಪಡೆದಿರುವ ಸಾಲದ ಋಣವು ರೂ. 2,90,000/- ಗಳನ್ನು ಮೀರತಕ್ಕದ್ದಲ್ಲ. | ಸಂಘದ ಹಾಗೂ ಸದಸ್ಯರ ಹಿತದೃಷ್ಟಿಯಿಂದ |
| 2 | ೩೮ಬಿ(i) | <u>ಅಲ್ಪಾವಧಿ ಸಾಲ :–</u> ಸಂಘದ ಸದಸ್ಯರಿಗೆ ರೂ. 20,000/- (ಇಪ್ಪತ್ತು ಸಾವಿರ ರೂಪಾಯಿಗಳು ಮಾತ್ರ) ಅಲ್ಪಾವಧಿ ಸಾಲವನ್ನಾಗಿ ಮಂಜೂರು ಮಾಡಬಹುದು. ಸದರಿ ಮೊತ್ತವನ್ನು ರೂ. 1000/- (ಒಂದು ಸಾವಿರ) ರೂಪಾಯಿಗಳಂತೆ 20 ಸಮಕಂತುಗಳಲ್ಲಿ ಸಾಲ ಮಂಜೂರು ಮಾಡಿದ ತಿಂಗಳಿನಿಂದ ವಸೂಲು ಮಾಡತಕ್ಕದ್ದು. ಆದಾಗ್ಯೂ<br>1) ಕಾಲಕಾಲಕ್ಕೆ ಆಡಳಿತ ಮಂಡಳಿಯು ನಿಗದಿಪಡಿಸುವ ಬಡ್ಡಿ ದರವು ಅಲ್ಪಾವಧಿ ಸಾಲಕ್ಕೆ ಅನ್ವಯವಾಗುತ್ತದೆ.<br>2) 10 ತಿಂಗಳ ಅಲ್ಪಾವಧಿ ಸಾಲ ತೀರಿದ ನಂತರ ಈ ಸಾಲವನ್ನು ನವೀಕರಿಸಬಹುದು.<br>3) ಅಲ್ಪಾವಧಿ ಸಾಲ ಮಂಜೂರು ಮಾಡುವಾಗ ಸದಸ್ಯರ ಮನೆಗೊಯ್ಯುವ ಸಂಬಳವನ್ನು ಪರಿಶಿಲಿಸಿ ಮಂಜೂರು ಮಾಡಲು ಕಾರ್ಯಕಾರಿ ಮಂಡಳಿಗೆ ಅಧಿಕಾರವಿರುತ್ತದೆ. | ೩೮ಬಿ(i) | <u>ಅಲ್ಪಾವಧಿ ಸಾಲ :–</u> ಸಂಘದ ಸದಸ್ಯರಿಗೆ ರೂ. 30,000/- (ಮೂವತ್ತು ಸಾವಿರ ರೂಪಾಯಿಗಳು ಮಾತ್ರ) ಅಲ್ಪಾವಧಿ ಸಾಲವನ್ನಾಗಿ ಮಂಜೂರು ಮಾಡಬಹುದು. ಸದರಿ ಮೊತ್ತವನ್ನು ರೂ.1500/- (ಒಂದು ಸಾವಿರದ ಐದು ನೂರು) ರೂಪಾಯಿಗಳಂತೆ 20 ಸಮಕಂತುಗಳಲ್ಲಿ ಸಾಲ ಮಂಜೂರು ಮಾಡಿದ ತಿಂಗಳಿನಿಂದ ವಸೂಲು ಮಾಡತಕ್ಕದ್ದು. ಆದಾಗ್ಯೂ<br>1) ಕಾಲಕಾಲಕ್ಕೆ ಆಡಳಿತ ಮಂಡಳಿಯು ನಿಗದಿಪಡಿಸುವ ಬಡ್ಡಿ ದರವು ಅಲ್ಪಾವಧಿ ಸಾಲಕ್ಕೆ ಅನ್ವಯವಾಗುತ್ತದೆ.<br>2) 10 ತಿಂಗಳ ಅಲ್ಪಾವಧಿ ಸಾಲ ತೀರಿದ ನಂತರ ಈ ಸಾಲವನ್ನು ನವೀಕರಿಸಬಹುದು.<br>3) ಅಲ್ಪಾವಧಿ ಸಾಲ ಮಂಜೂರು ಮಾಡುವಾಗ ಸದಸ್ಯರ ಮನೆಗೊಯ್ಯುವ ಸಂಬಳವನ್ನು ಪರಿಶಿಲಿಸಿ ಮಂಜೂರು ಮಾಡಲು ಕಾರ್ಯಕಾರಿ ಮಂಡಳಿಗೆ ಅಧಿಕಾರವಿರುತ್ತದೆ. | ಸಂಘದ ಹಾಗೂ ಸದಸ್ಯರ ಹಿತದೃಷ್ಟಿಯಿಂದ |

<table>
<tr><th>ಸಂಖ್ಯೆ</th><th>ಬೈಲಾ ಸಂಖ್ಯೆ</th><th>ಹಾಲಿ ಬೈಲಾ</th><th>ಬೈಲಾ ಸಂಖ್ಯೆ</th><th>ಪ್ರಸ್ತಾಪಿಸಿದ ತಿದ್ದುಪಡಿಗಳು<br>(ನಂತರ ಈ ರೀತಿ ಓದಿಕೊಳ್ಳುವುದು)</th><th>ತಿದ್ದುಪಡಿಗೆ ಕಾರಣಗಳು</th></tr>
<tr><td>3</td><td>65</td><td>ಕಲಂ 28ಎ ಆಡಳಿತ ಮಂಡಳಿ ರಚನೆ ಮತ್ತು ಚುನಾವಣೆ :<br>ಪದಾಧಿಕಾರಿಗಳ ಮತ್ತು ಆಡಳಿತ ಮಂಡಳಿಯ ಅವಧಿಯು ಚುನಾವಣೆ ನಡೆದ ದಿನಾಂಕದಿಂದ ಐದು ವರ್ಷಗಳಿರತಕ್ಕದ್ದು. ಸಂಘದ ಆಡಳಿತ ಮಂಡಳಿಗೆ ಒಟ್ಟು 17 ಸದಸ್ಯರನ್ನು ಚುನಾಯಿಸಬೇಕಾಗಿದ್ದು ಕೆಳಕಂಡಂತೆ ಮೀಸಲಾತಿ ನೀಡಲಾಗಿದೆ.<br>ಮೀಸಲಾತಿ :<br>1 ಸಾಮಾನ್ಯ ಸ್ಥಾನಗಳು 11<br>2 ಪರಿಶಿಷ್ಟ ಜಾತಿ 01<br>3 ಪರಿಶಿಷ್ಟ ಪಂಗಡ 01<br>4 ಮಹಿಳೆ 02<br>5 ಹಿಂದುಳಿದ ವರ್ಗ 02<br>ಒಟ್ಟು 17</td><td>65</td><td>ಕಲಂ 28ಎ ಆಡಳಿತ ಮಂಡಳಿ ರಚನೆ ಮತ್ತು ಚುನಾವಣೆ:<br>ಪದಾಧಿಕಾರಿಗಳ ಮತ್ತು ಆಡಳಿತ ಮಂಡಳಿಯ ಅವಧಿಯು ಚುನಾವಣೆ ನಡೆದ ದಿನಾಂಕದಿಂದ ಐದು ವರ್ಷಗಳಿರತಕ್ಕದ್ದು. ಸಂಘದ ಆಡಳಿತ ಮಂಡಳಿಗೆ ಒಟ್ಟು 15 ಸದಸ್ಯರನ್ನು ಚುನಾಯಿಸಬೇಕಾಗಿದ್ದು ಕೆಳಕಂಡಂತೆ ಮೀಸಲಾತಿ ನೀಡಲಾಗಿದೆ.<br>ಮೀಸಲಾತಿ :<br>1 ಸಾಮಾನ್ಯ ಸ್ಥಾನಗಳು 09<br>2 ಪರಿಶಿಷ್ಟ ಜಾತಿ 01<br>3 ಪರಿಶಿಷ್ಟ ಪಂಗಡ 01<br>4 ಮಹಿಳೆ 02<br>5 ಹಿಂದುಳಿದ ವರ್ಗ 02<br>ಒಟ್ಟು 15</td><td>ಸಂಘದ ಹಾಗೂ ಸದಸ್ಯರ ಹಿತದೃಷ್ಟಿಯಿಂದ</td></tr>
<tr><td>4</td><td>78</td><td>ಹೊಸ ಸೇರ್ಪಡೆ.</td><td>78</td><td>ಮರಣೋತ್ತರ ಅನುದಾನ ನಿಧಿ :<br>ಪ್ರತಿ ಸದಸ್ಯರಿಂದ ಕಡ್ಡಾಯವಾಗಿ ಪ್ರತಿ ತಿಂಗಳು ರೂ. 200/-(ಎರಡು ನೂರು ರೂಪಾಯಿ) ಗಳಂತೆ ವಂತಿಗೆಯನ್ನು ಮರಣೋತ್ತರ ಅನುದಾನ ನಿಧಿಗಾಗಿ ಕಟಾವು ಮಾಡತಕ್ಕದ್ದು .</td><td>ಸಂಘದ ಮೃತ ಸದಸ್ಯರ ಕುಟುಂಬದ ವಾರಸುದಾರರ ಅನುಕೂಲಕ್ಕಾಗಿ. (ಸಂಘದ ಸದಸ್ಯರ ಹಿತದೃಷ್ಟಿಯಿಂದ)</td></tr>
</table>

| ಸಂಖ್ಯೆ | ಬೈಲಾ ಸಂಖ್ಯೆ | ಹಾಲಿ ಬೈಲಾ | ಬೈಲಾ ಸಂಖ್ಯೆ | ಪ್ರಸ್ತಾಪಿಸಿದ ತಿದ್ದುಪಡಿಗಳು (ನಂತರ ಈ ರೀತಿ ಓದಿಕೊಳ್ಳುವುದು) | ತಿದ್ದುಪಡಿಗೆ ಕಾರಣಗಳು |
|---|---|---|---|---|---|
| | | | | 1) ಸಂಘದ ಸದಸ್ಯರು ಕರ್ತವ್ಯದ ಅವಧಿಯಲ್ಲಿ ಮೃತಪಟ್ಟರೆ ಅಂತಹ ಸದಸ್ಯರ ನಾಮನಿರ್ದೇಶಿತರಿಗೆ / ಉತ್ತರಾಧಿಕಾರಿಗೆ / ವಾರಸುದಾರರಿಗೆ ಸಂಘದಿಂದ ಮೃತ ಸದಸ್ಯರ ಮರಣೋತ್ತರ ನಿಧಿಯಿಂದ ಅನುಕಂಪದ ಆಧಾರದ ಮೇಲೆ ರೂ. **2,00,000/-** (ಎರಡು ಲಕ್ಷ ರೂಪಾಯಿಗಳು) (ಸಂಘಕ್ಕೆ ಬರಬೇಕಾದ ಎಲ್ಲಾ ಬಾಕಿಗಳನ್ನು ಹೊಂದಾಣಿಕೆ ಮಾಡಿಕೊಂಡ ನಂತರ) ಅನುದಾನವಾಗಿ ನೀಡತಕ್ಕದ್ದು.<br><br>2) ಸಂಘದ ಸದಸ್ಯರು ನಿವೃತ್ತಿ / ಕಡ್ಡಾಯ ನಿವೃತ್ತಿ / ಸ್ವಯಂ ನಿವೃತ್ತಿಯಾಗಿ ತಮ್ಮ ಖಾತೆಯನ್ನು ಮುಕ್ತಾಯಗೊಳಿಸಿಕೊಂಡಲ್ಲಿ ಮರಣೋತ್ತರ ಅನುದಾನ ನಿಧಿಗಾಗಿ ಅವರು ಮಾಹೆಯಾನ ಪಾವತಿಸಿರುವ ಒಟ್ಟು ಮೊತ್ತವನ್ನು ಬಡ್ಡಿ ರಹಿತವಾಗಿ ಮರುಪಾವತಿ ಮಾಡತಕ್ಕದ್ದು. | |

ತೆರೆದ–ಅಂಚೆ

ಖಾತೆ ಸಂಖ್ಯೆ :

ಗೆ,

ಶ್ರೀಮತಿ/ಶ್ರೀ

ಅಂಚೆ ವಿಲೇವಾರಿಯಾಗದಿದ್ದಲ್ಲಿ ಈ ಕೆಳಗಿನ ವಿಳಾಸಕ್ಕೆ ಹಿಂತಿರುಗಿಸಿ :
**ನ್ಯಾಯಾಂಗ ಇಲಾಖೆ ವಿವಿಧೋದ್ದೇಶ ಸಹಕಾರ ಸಂಘ ನಿಯಮಿತ**
ಮೊದಲನೇ ಮಹಡಿ, ಹಳೆಯ ಕೆ.ಜಿ.ಐ.ಡಿ ಕಟ್ಟಡ,
ಉಚ್ಚ ನ್ಯಾಯಾಲಯ ಆವರಣ, ಬೆಂಗಳೂರು–560 001.